ಶ್ರೀ ಜಿ. ಬಸವಣ್ಣಪ್ಪ.— (ಆಹಾರ ಮತ್ತು ನಾಗರೀಕಸರಬರಾಜು ಮಂತ್ರಿಗಳು) (ಉತ್ತರ ಲಗತ್ತಿಸಿದೆ.)

ಶ್ರೀ ವಿ. ಧನಂಜಯಕುಮಾರ್.— ಸ್ವಾಮಿ, ೧೯೮೨-೮೩ನೇ ಇಸವಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಮಂತ್ರು ಒಂದು ಪಡಿತರ ಚೀಟಿಗೆ ಸಂಬಂಧಿಸಿದಹಾಗೆ ಮಂಗಳೂರು ನಗರ ಪಡಿತರ ಪ್ರದೇಶದಲ್ಲಿ ವಿತರಿಸಿದ ಅಕ್ಕಿಯ ಪ್ರಮಾಣ ಎಷ್ಟು ಎಂಬುದಕ್ಕೆ ತಃಪ್ತಿ ಲಗತ್ತಿಸಿದ್ದೀರಿ. ೧೯೮೩ನೇ ಇಸವಿಯಲ್ಲಿ ಎಷ್ಟು ಒದಗಿಸಿದ್ದೀರಿ ಎಂಬ ಬಗ್ಗೆ ವಿವರ ಕೊಟ್ಟಿದ್ದೀರಿ. ಆದರೆ ಇದನ್ನು ನೋಡುವಾಗ ನೀವು ಬಿಡುಗಡೆ ಮಾಡಿದಷ್ಟು ವಿತರಣೆಯಾಗಿಲ್ಲ ಎಂಬುದು ಕಂಡುಬರುತ್ತದೆ. ಈ ರೀತಿ ವಿತರಣೆ ಆಗದೇ ಇರುವುದಕ್ಕೆ ವಿನು ಕಾರಣ ಎಂಬುದನ್ನು ತಿಳಿಸಬೇಕು.

ಶ್ರೀ ಜಿ. ಬಸವಣ್ಣಪ್ಪ.— ಮಂಗಳೂರಿನಲ್ಲಿ ಒಬ್ಬ ಅಡಲ್ಟ್‌ಗೆ ೧ ಯೂನಿಟ್‌ಗೆ ೩ ಕೇಜಿ ಹಾಗೂ ಮಕ್ಕಳಿಗೆ ೧ ಕೇಜಿ ರೀತಿ ರೇಷನ್ ಕೊಡುವ ಪದ್ಧತಿ ಇದೆ. ೧೯೮೨ರಲ್ಲಿ ಅಲಾಟ್ ಮಾಡಿರುವಂತಹದ್ದು ವಿನಿದೆ ಅದು ಆಫ್‌ಟೇಕ್ ಆಗಿಲ್ಲ. ಹಾಗೂ ೧೯೮೩ರಲ್ಲಿ ಎಷ್ಟು ಅಲಾಟ್ ಮಾಡಿದ್ದೆವೋ ಅಷ್ಟೂ ಆಫ್‌ಟೇಕ್ ಆಗಿದೆ. ೧೯೮೩ರಲ್ಲಿ ಮಾರ್ಕೆಟ್ ರೇಟ್‌ಗಿಂತಾ ನಾವು ಕೊಟ್ಟ ಬೆಲೆ ಕಡಿಮೆ ಇದ್ದುದರಿಂದ ಅಲಾಟ್ ಮಾಡಿದ್ದನ್ನೆಲ್ಲಾ ಆಫ್‌ಟೇಕ್ ಮಾಡಿದ್ದಾರೆ. ಆದರೆ ೧೯೮೨ರಲ್ಲಿ ಮಾರ್ಕೆಟ್ ರೇಟ್‌ಗೂ ನಾವು ಕೊಡತಕ್ಕ ರೇಟ್‌ಗೂ ವ್ಯತ್ಯಾಸ ಇಲ್ಲದಿದ್ದುದರಿಂದ ಅಲಾಟ್‌ಮೆಂಟ್ ಎತ್ತಿರುವುದಿಲ್ಲ.

ಶ್ರೀ ವಿ. ಧನಂಜಯಕುಮಾರ್.— ತಾವು ಬಿಡುಗಡೆ ಮಾಡತಕ್ಕ ಅಕ್ಕಿಯ ಪ್ರಮಾಣವನ್ನು ಸರಿಯಾಗಿ ವಿತರಣೆ ಮಾಡದೇ ಇರುವುದಕ್ಕೆ ಕಾರಣ ಸರ್ಕಾರದಿಂದ ಕೊಡಬೇಕಾದ ಸಬ್ಸಿಡಿಯನ್ನು ಸರಿಯಾದ ಸಮಯಕ್ಕೆ ಕೊಡದೇ ಇರುವುದು ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಾ ? ಇವತ್ತು ಮಂಗಳೂರು ಜನತಾ ಬಜಾರ್‌ನಲ್ಲಿ ಸುಮಾರು ೧೮ ಲಕ್ಷ ರೂಪಾಯಿಗಳಷ್ಟು ಹಣ ಸರ್ಕಾರದಿಂದ ಸಬ್ಸಿಡಿ ಬರಬೇಕಾಗಿದ್ದು ಇಡೀ ಜಿಲ್ಲೆಗೆ ೩೫ ಲಕ್ಷ ರೂಪಾಯಿ ಬರಬೇಕಾಗಿದೆ. ಇದರಿಂದ ಅಕ್ಕಿ ಸರಿಯಾಗಿ ವಿತರಣೆ ಆಗಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.— ೧೯೮೩ರಲ್ಲಿ ಎಲ್ಲಾ ಅಕ್ಕಿಯನ್ನು ಆಫ್‌ಟೇಕ್ ಮಾಡಲಾಗಿದೆ. ಮಾನ್ಯ ಸದಸ್ಯರು ಹೇಳುವ ರೀತಿ ಸಬ್ಸಿಡಿಯನ್ನು ಕೊಡುವುದರಲ್ಲಿ ತಡವಾಗಿದೆ. ಆ ಬಗ್ಗೆ ಸರ್ಕಾರ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ವಿ. ಧನಂಜಯಕುಮಾರ್.— ಈ ದಿನ ಜನತಾಬಜಾರ್‌ನವರು ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್‌ನಿಂದ ಶೇಕಡಾ ೧೧ರಷ್ಟು ಬಡ್ಡಿ ತೆತ್ತು ಹಣ ತಂದು ಅಕ್ಕಿಯನ್ನು ಪಡೆಯುತ್ತಾರೆ. ಆದರೆ ಸರ್ಕಾರ ಕೊಡಬೇಕಾದ ಸಬ್ಸಿಡಿಯನ್ನು ಸರಿಯಾದ ಕಾಲಕ್ಕೆ ಕೊಡದಿದ್ದರೆ ಪರಿಸ್ಥಿತಿ ಬಹಳ ಗಂಭೀರವಾಗುತ್ತದೆ. ಇವತ್ತು ಮಂಗಳೂರಿನಲ್ಲಿ ಯಾರೂ ಭತ್ತ ಬೆಳೆಯುವುದಿಲ್ಲ. ಎಲ್ಲರೂ ರೇಷನ್‌ನಿಂದ ಅಕ್ಕಿ ಪಡೆದುಕೊಳ್ಳಬೇಕಾಗಿದೆ. ಇವತ್ತು ಓಪನ್ ಮಾರ್ಕೆಟ್‌ನಲ್ಲಿ ಅಕ್ಕಿ ಬೆಲೆ ಳಿರಿಂದ ನಾಲ್ಕೂವರೆ ರೂಪಾಯಿ ಆಗಿದೆ ಇದರಿಂದಾಗಿ ವೇಟಿಯ ಕೂಲಿಕಾರ್ಮಿಕರು ಅಕ್ಕಿಯನ್ನು ಓಪನ್ ಮಾರ್ಕೆಟ್‌ನಿಂದ ತಂದು ತಿನ್ನುವುದಕ್ಕಾಗುವುದಿಲ್ಲ. ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜಿ. ಬಸವಣ್ಣಪ್ಪ.— ಅವರು ಹೇಳಿದಹಾಗೆ ಬಾಕಿಯನ್ನು ಕೊಡಬೇಕಾಗಿದೆ. ೩ ದಿವಸಗಳ ಹಿಂದೆ ನಾವು ಈ ಬಗ್ಗೆ ೧೦ ಲಕ್ಷ ರೂಪಾಯಿ ರೀಲೀಸ್ ಮಾಡಿದ್ದೇವೆ. ಇನ್ನು ಬಾಕಿ ಹಣದ ಬಗೆ ಆದಷ್ಟು ಬೇಗ ಇದನ್ನು ಬಗೆ ಹರಿಸುತ್ತೇವೆ.

ತಾಲ್ಲೂಕು ಕೇಂದ್ರಗಳಲ್ಲಿರುವ ಆರಕ್ಷಕ ಸಿಬ್ಬಂದಿ

೧೪೧೬. ಶ್ರೀ ಜಿ. ಬಸಪ್ಪ (ಹೊಸದುರ್ಗ).— ಒಳಾಡಳಿತ ಹಾಗೂ ರಾಷ್ಟ್ರೀಯ ಉಳಿತಾಯ ಯೋಜನಾ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

ಅ) ತಾಲ್ಲೂಕು ಕೇಂದ್ರಗಳಲ್ಲಿರುವ ಆರಕ್ಷಕ ಠಾಣೆಗಳಿಗೆ ನಿಗದಿಗೊಳಿಸಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು?

ಅ) ಹೊಸದುರ್ಗದಲ್ಲಿರುವ ಆರಕ್ಷಕ ಠಾಣೆಯಲ್ಲಿ ಹಾಲಿಯಿರುವ ದರ್ಜೆವಾರುಗಳ ಸಿಬ್ಬಂದಿ ಸಂಖ್ಯೆ ಎಷ್ಟು ಹಾಗೂ ಅದು ತಾಲ್ಲೂಕು ಕೇಂದ್ರದ ಠಾಣೆಗೆ ಸರಿಸಮಾನವಾಗಿದೆಯೆ ?

ಶ್ರೀ ಜೆ. ಬಸಪ್ಪ.— ಅಧ್ಯಕ್ಷರೇ, ತಾಲ್ಲೂಕು ಕೇಂದ್ರದಲ್ಲಿ ಎಷ್ಟು ಸಿಬ್ಬಂಧಿ ವರ್ಗ ಇರಬೇಕೋ ಅಷ್ಟು ಸಿಬ್ಬಂಧಿ ವರ್ಗ ಹೊಸದುರ್ಗದ ಆರಕ್ಷಕರ ಠಾಣೆಯಲ್ಲಿ ಇದೆಯೇ ಎಂದು ತಿಳಿದುಕೊಳ್ಳಲು ನಾನು ಪ್ರಶ್ನೆ ಕಳುಹಿಸಿದ್ದೇನೆ.

ಶ್ರೀ ರಮೇಶ್ ಜಿಗಜಿಣಗಿ.— ಮಾನ್ಯ ಅಧ್ಯಕ್ಷರೇ, ಒಂದು ಠಾಣೆಯಿಂದ ಇನ್ನೊಂದು ಠಾಣೆಗೆ ಸಿಬ್ಬಂಧಿವರ್ಗಗಳನ್ನು ನೇಮಿಸುವುದರಲ್ಲಿ ವ್ಯತ್ಯಾಸ ಇರುತ್ತದೆ. ಈ ಬಗ್ಗೆ ಪೋಲೀಸ್ ಪೇದೆಯನ್ನಾಗಲೀ, ಸಬ್ ಇನ್ಸ್‌ಪೆಕ್ಟರನ್ನು ಆಗಲೀ ಬೇರೆ ಬೇರೆ ಸಂಖ್ಯೆಯಲ್ಲಿ ನಿಗಧಿಪಡಿಸಿರುತ್ತೇವೆ. ಮಾನ್ಯ ಸದಸ್ಯರು ಹೊಸದುರ್ಗದ ಆರಕ್ಷಕ ಠಾಣೆ ಬಗ್ಗೆ ಕೇಳಿದ್ದಾರೆ. ಇಲ್ಲಿ ಒಬ್ಬರು ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ ಹಾಗೂ ೪೫ಜನರು ಪೇದೆಗಳು ಕಡಿಮೆ ಇದ್ದಾರೆ ಎಂದು ನಾನು ಹೇಳುತ್ತೇನೆ. ಆದರೆ ಒಂದು ಠಾಣೆಗಿಂತಾ ಇನ್ನೊಂದು ಠಾಣೆಯಲ್ಲಿ ಸಿಬ್ಬಂಧಿವರ್ಗದಲ್ಲಿ ವ್ಯತ್ಯಾಸ ಇರುತ್ತದೆ.

ಶ್ರೀ ಎಚ್. ಗಂಗಾಧರಪ್ಪ.— ಕನ್ನಡದಲ್ಲಿ ಆವರನ್ನು ''ಪೇದೆ'' ಎಂದು ಕರೆಯುವುದರ ಬದಲು 'ರಕ್ಷಕ' ಎಂದು ಕರೆದರೆ ಚೆನ್ನಾಗಿರುತ್ತದೆ. ಈ ಪೇದೆ ಎನ್ನುವುದು ಒಂದು ವ್ಯಾಧಿಯಾಗಿದೆ.

ಅಧ್ಯಕ್ಷರು.— 'ರಕ್ಷಕ' ಎಂದು ಆದರೆ ಅದು ನಂತರ 'ಆರಕ್ಷಕ' ಆಗಬಹುದಲ್ಲವೇ ?

ಶ್ರೀ ಎಚ್. ಗಂಗಾಧರಪ್ಪ.— ಈಗಾಗಲೇ ನಾವು ಪೋಲೀಸರನ್ನು ''ಆರಕ್ಷಕ'' ಎಂದು ಹೇಳುತ್ತಿದ್ದೇವೆ.

ಶಿಡ್ಲಘಟ್ಟ ಆಸ್ಪತ್ರೆಗೆ ಕ್ಷ-ಕಿರಣ ಯಂತ್ರ.

೧೬೧. ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ವಿಷಯಗಳನ್ನು ದಯಮಾಡಿಸಿ ಉತ್ತರಿಸುವರೆ ?

ಅ) ಶಿಡ್ಲಘಟ್ಟ ಟೌನ್ ಆಸ್ಪತ್ರೆಯಲ್ಲಿ ಕ್ಷ— ಕಿರಣ (ಎಕ್ಸ್‌ರೇ) ಉಪಕರಣವನ್ನು ಅಳವಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).—

ಅ) ಶಿಡ್ಲಘಟ್ಟ ಆಸ್ಪತ್ರೆಗೆ ಕ್ಷ-ಕಿರಣ ಯಂತ್ರ ಮಂಜೂರಾಗಿರುವುದಿಲ್ಲ. ಆದ್ದರಿಂದ ಅಳವಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ವಿ. ಮುನಿಯಪ್ಪ.—ಅಧ್ಯಕ್ಷರೇ, ಶಿಡ್ಲಘಟ್ಟ ತಾಲ್ಲೂಕಿನಲ್ಲಿ ರೇಷ್ಮೆ ಕೈಗಾರಿಕೆ ಬಹಳ ಪ್ರಮಾಣದಲ್ಲಿದ್ದು ಅಲ್ಲಿನ ಬಹಳ ಜನ ಅನೇಕ ವರ್ಷಗಳಿಂದ ಕ್ಷಯ ರೋಗದಿಂದ ನರಳುತ್ತಿದ್ದಾರೆಂದು ಅಲ್ಲಿಯ ವೈದ್ಯರು ತಮ್ಮ ಅಭಿಪ್ರಾಯವನ್ನು ಕೊಟ್ಟಿದ್ದರೂ ಸಹ ಅಲ್ಲಿ ಒಂದು ಕ್ಷಕಿರಣ ಉಪಕರಣ ಅಳವಡಿಸಲು ಸರ್ಕಾರ ಗಮನ ಹರಿಸದಿರುವುದಕ್ಕೆ ಕಾರಣ ಏನು ? ಈ ಬಗ್ಗೆ ನಾನು ಅನೇಕ ವರ್ಷಗಳಿಂದ ಸರ್ಕಾರಕ್ಕೆ ಕೇಳುತ್ತಿದ್ದೇನೆ. ಈ ವಿಷಯವನ್ನು ಯಾವಾಗ ಪರಿಗಣಿಸುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಈ ಬಗ್ಗೆ ೧೯೮೪—೮೫ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು ಎಂದು ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ.

ಶ್ರೀ ವಿ. ಮುನಿಯಪ್ಪ.—ಇದನ್ನು ಪರಿಶೀಲನೆ ಮಾಡುವುದು ಅಲ್ಲ ಸ್ವಾಮಿ. ಇದನ್ನು ದಯಮಾಡಿ ಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ ೧೫ ರಿಂದ ೨೦ ಸಾವಿರ ಜನ ರೇಷ್ಮೆ ನೂಲನ್ನು ಬಿಚ್ಚುತ್ತಿದ್ದಾರೆ. ಇವರಲ್ಲಿ ಶೇಕಡಾ ೪೦ರಷ್ಟು ಜನರಲ್ಲಿ ಕ್ಷಯ ರೋಗ ಇದೆ ಎಂದು ಅಲ್ಲಿನ ಡಾಕ್ಟರುಗಳ ಅಭಿಪ್ರಾಯ ಇದೆ. ಆದ್ದರಿಂದ ಈ ವರ್ಷವೇ ಕ್ಷ-ಕಿರಣ ಉಪಕರಣವನ್ನು ಕೊಡುವುದಕ್ಕೆ ಪ್ರಯತ್ನ ಪಡುತ್ತೀರಾ ? ಇನ್ನು ಮತ್ತೊಂದು ವಿಷಯವೇನೇದರೆ ನಮ್ಮ ತಾಲ್ಲೂಕಿನ ಸಾದಲಿ ಮತ್ತು ಬಶೆಟ್ಟಿ